ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1323
ಸದಸ್ಯರ ಹೆಸರು	:	ಶ್ರೀ ಎಸ್. ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	21-12-2018
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಭಾರತ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ (AMRUT) ಅಮೃತ್ ಯೋಜನೆಗೆ ರಾಜ್ಯ ಸರ್ಕಾರಕ್ಕೆ ನೀಡಿರುವ ಜಿಲ್ಲಾವಾರು ಅನುದಾನ ಎಷ್ಟು; ಇದರ ಕಾರ್ಯ ಪ್ರಗತಿ ಯಾವ ಹಂತದಲ್ಲಿದೆ; ಈ ಯೋಜನೆಯ ಆಶಯದಂತೆ ಪರಿಸರಕ್ಕೆ ಧಕ್ಕೆಯಾಗದಂತೆ ಅನುಷ್ಠಾನ ಗೊಳಿಸಲಾಗುತ್ತಿದೆಯೇ:	ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ರಾಜ್ಯದ 5 ವರ್ಷಗಳ ರೂ.4952.87 ಕೋಟಿ ಮೊತ್ತದ ವಾರ್ಷಿಕ ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರದಿಂದ ಅಪೆಕ್ಸ್ ಸಮಿತಿಯ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯಡಿ ರಾಜ್ಯದ 27 ನಗರಗಳು ಆಯ್ಕೆಯಾಗಿದ್ದು, ಅವುಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ. ಯೋಜನೆಯಡಿ ಕೈಗೊಂಡ ರೂ.4952.87 ಕೋಟಿ ಮೊತ್ತದ 405 ಕಾಮಗಾರಿಗಳಲ್ಲಿ ರೂ.22.77 ಕೋಟಿ ಮೊತ್ತದ 46 ಕಾಮಗಾರಿಗಳು ಪೂರ್ಣಗೊಂಡಿವೆ. ರೂ.4583.19 ಕೋಟಿ ಮೊತ್ತದ 252 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ರೂ.579.02 ಕೋಟಿ ಮೊತ್ತದ 105 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ ಮತ್ತು ರೂ. 2.96 ಕೋಟಿ ಮೊತ್ತದ 2 ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಿದೆ. ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ. ಯೋಜನೆಯಡಿ ನವೆಂಬರ್ 2018ರ ಅಂತ್ಯಕ್ಕೆ ಒಟ್ಟು ರೂ.1487.02 ಕೋಟಿಗಳು ವೆಚ್ಚವಾಗಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮೋದನೆ ಪಡೆದು, ಮಲಿನ ನೀರು ಶುದ್ಧೀಕರಣಗಾರ ಘಟಕವನ್ನು ನಿರ್ಮಿಸಲಾಗುತ್ತಿದೆ. CPHEEO Norms ಗಳಂತೆ ಮಲಿನ ನೀರನ್ನು ಶುದ್ಧೀಕರಿಸಿ, ಶುದ್ಧೀಕರಿಸಿದ ನೀರನ್ನು ನೈಸರ್ಗಿಕ ನಾಲೆಗಳಿಗೆ ಬಿಡಲಾಗುವುದು. ಆದ್ದರಿಂದ, ಕೈಗೊಂಡಿರುವ ಕಾಮಗಾರಿಗಳನ್ನು ಪರಿಸರಕ್ಕೆ ಧಕ್ಕೆಯಾಗದಂತೆ ಅನುಷ್ಠಾನಗೊಳಿಸಲಾಗುತ್ತಿದೆ.

ಆ)	ಅಮೃತ್ ಯೋಜನೆ ಮತ್ತು ಸ್ಮಾರ್ಟ್ ಸಿಟಿ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಅನುದಾನ ಎಷ್ಟು;	'ಅಮೃತ್' ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಇದುವರೆಗೆ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ;
ಇ)	ಬಿಡುಗಡೆಯಾದ ಅನುದಾನದಲ್ಲಿ ಯೋಜನೆಗೆ ಖರ್ಚಾದ ಅನುದಾನ ಎಷ್ಟು? (ವಿವರ ನೀಡುವುದು)	

(ರೂ. ಕೋಟಿಗಳಲ್ಲಿ)

ಕೇಂದ್ರ	ರಾಜ್ಯ	ಒಟ್ಟು
1159.40	467.63	1627.03

ಅಮೃತ್ ಯೋಜನೆಯಡಿ ಬಿಡುಗಡೆಯಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ ರೂ.1627.03 ಕೋಟಿ ಮತ್ತು ನಗರ ಸ್ಥಳೀಯ ಸಂಸ್ಥೆಯ ವಂತಿಕೆ ರೂ.422.06 ಕೋಟಿ, ಒಟ್ಟು ರೂ.2049.09 ಕೋಟಿಗಳಲ್ಲಿ ನವೆಂಬರ್ 2018 ರ ಅಂತ್ಯದ ವರೆಗೆ ಒಟ್ಟು ರೂ.1487.02 ಕೋಟಿಗಳು ವೆಚ್ಚವಾಗಿದೆ. ವಿವಿಧ ವಲಯಗಳಲ್ಲಿ ವೆಚ್ಚ ಮಾಡಲಾದ ವಿವರಗಳು ಈ ಕೆಳಕಂಡಂತಿದೆ;

(ರೂ. ಕೋಟಿಗಳಲ್ಲಿ)

ಕ್ರ.ಸಂ	ವಲಯ	ವೆಚ್ಚ
1	ನೀರು ಸರಬರಾಜು	668.52
2	ಒಳಚರಂಡಿ	784.62
3	ಮಳೆ ನೀರು ಚರಂಡಿ	8.23
5	ನಗರ ಸಾರಿಗೆ	5.07
6	ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ	20.58
	ಒಟ್ಟು	**1487.02**

ಸ್ಮಾರ್ಟ್ ಸಿಟಿ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳು ಕೆಳಗಿನಂತಿವೆ;

ರೂ.ಕೋಟಿಗಳಲ್ಲಿ

ಕ್ರ.ಸ.	ನಗರಗಳು	ಬಿಡುಗಡೆಯಾದ ಮೊತ್ತ			ವೆಚ್ಚ
		ಕೇಂದ್ರ	ರಾಜ್ಯ	ಒಟ್ಟು	
1	ಬೆಳಗಾವಿ	196	200	396	17.18
2	ದಾವಣಗೆರೆ	196	200	396	23.88
3	ಹುಬ್ಬಳ್ಳಿ-ಧಾರವಾಡ	111	109	220	12.08
4	ಮಂಗಳೂರು	111	109	220	5.86
5	ಶಿವಮೊಗ್ಗ	111	109	220	6.75
6	ತುಮಕೂರು	111	109	220	25.59
7	ಬೆಂಗಳೂರು	50	50	100	0
	ಒಟ್ಟು	886	886	1772	91.34

ಸಂಖ್ಯೆ: ನಅಇ 275 ಸಿಎಸ್ಎಸ್ 2018

(ಯು.ಟಿ.ಖಾದರ್)
ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು.

Annexure - 1.

LCQ 1323

Details of Allocation for the Cities under AMRUT Scheme
(2015-16 to 2019-2020)

Rs. in crore

Sl.No.	Name of District	Name of ULB	Total Allocation
1	Bagalkote	Badami TMC	35.13
2	Bagalkote	Bagalkote CMC	114.43
3	Bengaluru	Bengaluru CC	939.17
4	Belagavi	Belagavi CC	179.59
5	Ballari	Ballari CC	180.69
6	Shivamogga	Bhadravathi CMC	153.03
7	Bidar	Bidar CMC	176.99
8	Vijapura	Vijapura CC	181.98
9	Chickamagalur	Chickamagalur CMC	119.32
10	Chitradurga	Chitradurga CMC	140.57
11	Davanagere	Davanagere CC	179.96
12	Dharwad	Hubli Dharwad CC	176.76
13	Gadag	Gadag-Betageri CMC	188.89
14	Koppal	Gangavathy CMC	110.78
15	Kalburgi	Kalburgi CC	172.37
16	Hassan	Hassan CMC	142.28
17	Ballari	Hospete CMC	175.64
18	Kolar	Kolar CMC	138.37
19	Mandya	Mandya CMC	138.90
20	Dakshina Kannada	Mangaluru CC	185.52
21	Mysore	Mysore CC	189.94
22	Raichur	Raichur CMC	176.42
23	Haveri	Rannebennur CMC	118.60
24	Kolar	Robersonpet CMC	145.26
25	Shivamogga	Shivamogga CC	180.82
26	Tumkuru	Tumkuru CC	178.93
27	Udupi	Udupi CMC	132.53
		Total	**4952.87**

Annexure-2

Status of Works under AMRUT

SN	Project	Total Allocated Amount (Cr.)	Total No. of Works	SHPSC Approval			Projects Completed			Projects Awarded			Under Tendering			Yet to be Tendered		
				No.	Amount	%	No.	Amount	%	No.	Amount	%	No.	Amount	%	No.	Amount	%
1	Water Supply	2114.43	43	43	2114.43	42.70	0	0.00	0.00	38	2003.85	94.77	5	207.16	9.8	0	0.00	0.00
2	Sewerage (UGD)	2417.01	51	51	2417.01	48.80	0	0.00	0.00	46	2444.70	101.15	5	114.70	4.75	0	0.00	0.00
3	Storm Water Drain	249.782	84	84	249.78	5.04	7	4.93	1.97	18	28.66	11.47	59	219.60	87.92	0	0.00	0.00
4	Green Space & Parks	115.50	182	182	115.50	2.33	34	14.61	12.65	127	83.46	72.26	19	12.32	10.67	2	2.96	2.56
5	Urban Transport	56.15	45	45	56.15	1.13	5	3.24	5.77	23	22.53	40.11	17	25.24	44.94	0	0.00	0.00
	Total =	4952.87	405	405	4952.87	100.0	46	22.77	0.46	252	4583.19	92.54	105	579.02	11.69	2	2.96	0.06